**<u>ದಿನಾಂಕಃ 06-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.T.B.D ವಕೀಲರಿಂದಃ</u>**

1. ನಾನು ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಶಿಕಾರಿಪುರದಿಂದ ಬಂದಿರುತ್ತೇನೆ. ನನ್ನ ಸ್ವಂತ ಊರು ಮೇದೂರು ಆಗಿರುತ್ತದೆ . ಈಗ ಬಾಗನಕಟ್ಟೆ ಗ್ರಾಮದಲ್ಲಿ ವಾಸವಾಗಿರುತ್ತೇನೆ. ರಾಣೇಬೆನ್ನೂರು ಮಾರುತಿ ನಗರದಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿರುವುದಿಲ್ಲ. ನಮ್ಮ ಸಂಬಂಧಿಕರು ರಾಣೇಬೆನ್ನೂರಿನಲ್ಲಿ ಇರುತ್ತಾರೆ. ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಿಸಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತದ ದಿನ ಬಗನಕಟ್ಟೆಯಿಂದ ಗೊದ್ದನಕೊಪ್ಪಕ್ಕೆ ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದೆನು. ಮೋಟಾರ್ ಸೈಕಲ್ ನ್ನು ನನ್ನ ಮಗ ಚಲಾಯಿಸುತ್ತಿದ್ದ. ಮೋಟಾರ್ ಸೈಕಲ್ ನಂಬರ್ ನನಗೆ ಹೇಳಲು ಆಗುವುದಿಲ್ಲ. ಸದರಿ ಬೈಕ್ ನಲ್ಲಿ ನಾನು ಹಿಂಬದಿ ಸವಾರನಾಗಿ ಕುಳಿತಿದ್ದೆನು. ನಾನು ಮೋಟಾರ್ ಸೈಕಲ್ ನಲ್ಲಿ 2 ಸಿಲಿಂಡರ್ ಹಿಡಿದುಕೊಂಡು ಕುಳಿತಿದ್ದೆನು ಎಂದರೆ ಸಾಕ್ಷಿ ಒಂದು ಸಿಲಿಂಡರ್ ಹಿಡಿದುಕೊಂಡು ಕುಳಿತಿದ್ದೆನು ಎಂದು ಹೇಳುತ್ತಾರೆ. ಮೋಟಾರ್ ಸೈಕಲ್ ನಲ್ಲಿ ಸಂತೆಯ ಗಂಟು ಸಹ ಇತ್ತು ಎಂದರೆ ಸರಿಯಲ್ಲ. ನನ್ನ ಮಗ ಮೋಟಾರ್ ಸೈಕಲ್ ನ್ನು ವೇಗವಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ.

2. ಅಪಘಾತ ಯಾವ ದಿನಾಂಕ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಅಪಘಾತ

ಸಂಪೂರ್ಣವಾಗಿ ನನ್ನ ಮಗನ ತಪ್ಪಿನಿಂದಲೆ ಆಗಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ದಲ್ಲಿ ನನ್ನ ಕಾಲಿಗೆ ಮತ್ತು ಭುಜಕ್ಕೆ ಪೆಟ್ಟು ಬಿದ್ದಿರುತ್ತದೆ. ಅಪಘಾತ ಆದ ನಂತರ ಯಾವ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಚಿಕಿತ್ಸೆಗಾಗಿ ರೂ.2,60,000/- ರೂಪಾಯಿ ಖರ್ಚಾಗಿದೆ ಎಂದು ತೋರಿಸಲು ಬಿಲ್ ನ್ನು ಹಾಜರು ಪಡಿಸಿರುತ್ತೇನೆ. ಹೆಚ್ಚಿನ ಚಿಕಿತ್ಸೆಗಾಗಿ ರೂ.1,10,000/- ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಾದಾ ಸ್ವರೂಪದ ಗಾಯವಾಗಿದೆ ಎಂದರೆ ಸರಿಯಲ್ಲ.

3. ಅಪಘಾತ ಸಮಯಕ್ಕೆ ನನಗೆ 55-56 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ಇನ್ನು ಹೆಚ್ಚಿಗೆ ಆಗಿರಬಹುದು ಎಂದು ಹೇಳುತ್ತಾರೆ. ನಾನು ರೈತರ ಕುಟುಂಬದಿಂದ ಬಂದಿರುತ್ತೇನೆ. ನಾನು ಈಗ ಹೊಲ ಗದ್ದೆ ಕೆಲಸ ಮಾಡುತ್ತೇನೆ. ನಮ್ಮ ಮನೆಯಲ್ಲಿ 5-6 ಮಂದಿ ಇರುತ್ತೇವೆ. ಮನೆಯ ಯಜಮಾನ ನಾನೇ ಆಗಿರುತ್ತೇನೆ. ನನ್ನ ಕುಟುಂಬ ನನ್ನ ದುಡಿಮೆಯಿಂದಲೆ ನಡೆಯುತ್ತದೆ. ಸಾಕ್ಷಿ ಮುಂದುವರೆದು ಮಕ್ಕಳು ಸಹ ದುಡಿಯುತ್ತಾರೆ ಎಂದು ಹೇಳುತ್ತಾರೆ. ನನಗೆ ಸರ್ಕಾರದಿಂದ ರೂ.1200/- ರೂಪಾಯಿ ವೃದ್ಧ್ಯಾಪ್ಯ ವೇತನ ಬರುತ್ತದೆ.

4. ಸಿಲಿಂಡರ್ ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ. ಅಪಘಾತವಾದ ಬಗ್ಗೆ ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. ಅಪಘಾತದ ಬಗ್ಗೆ ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ಅಪಘಾತ ಸಂಪೂರ್ಣವಾಗಿ ನನ್ನ ಮಗನ ತಪ್ಪಿನಿಂದಲೆ ಆಗಿದ್ದು, ಕೆ ಎ 15 ಇ ಬಿ 8043 ನೇದ್ದರ ಚಾಲಕನ ಯಾವುದೆ ತಪ್ಪು ಇಲ್ಲ ಎಂದರೆ ಸರಿಯಲ್ಲ. ಕೆ ಎ 15 ಇ ಬಿ 8043 ನೇದ್ದರ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ತಯಾರಿಸಿದ ಪಂಚನಾಮೆ ಮತ್ತು ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಿಪಿ-3 ಮಹಜರ್ ನಲ್ಲಿ ಅಪಘಾತ ಕೆ ಎ 15 ಎಕ್ಸ 5761 ನೇದ್ದರ ಚಾಲಕನ ತಪ್ಪಿನಿಂದ ಆಗಿದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ- 6 ಅಂತಿಮ ವರದಿಯಲ್ಲಿ ಸಹ ನನ್ನ ಮಗನ ತಪ್ಪಿನಿಂದಲೆ ಅಪಘಾತ ಆಗಿದೆ ಎಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ನನ್ನ ಮಗನ ತಪ್ಪಿನಿಂದಲೆ ಆಗಿರುವುದರಿಂದ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಆ ವಿಚಾರ ನನಗೆ ಸಂಪೂರ್ಣವಾಗಿ ಗೊತ್ತಿದ್ದರೂ ಸಹ ಪೋಲಿಸರೊಂದಿಗೆ ಮಿಲಾಪೆಯಾಗಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

***P.W-1***

**<u>ಮರು ವಿಚಾರಣೆಃ ಏನೂ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.